## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : 364(482) |
| ಸದಸ್ಯರ ಹೆಸರು | : ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 19.02.2024. |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಅಗತ್ಯವಾಗಿ ಬೇಕಾಗಿರುವ ಕೊಠಡಿ, ಪೀಠೋಕರಣಗಳ ಹಾಗೂ ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮವೇನು:</td><td>

ಬಂದಿದೆ.

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕೊಠಡಿ ನಿರ್ಮಾಣ ಮತ್ತು ದುರಸ್ತಿಗೆ ಕಳೆದ 03 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಮಂಜೂರು ಮಾಡಲಾಗಿದೆ.

- ಪ್ರಾಥಮಿಕ ಮತ್ತು ಪ್ರೌಢಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಮಂಜೂರಾದ ಅನುದಾನದ ವಿವರ:-

<table>
<tr><th>ವರ್ಷ</th><th>ಶಾಲೆಗಳ ಸಂಖ್ಯೆ</th><th>ಕೊಠಡಿಗಳ ಸಂಖ್ಯೆ</th><th>ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ)</th></tr>
<tr><td>2020-21 ಮತ್ತು 2021-22</td><td>1004</td><td>1479</td><td>18000.00</td></tr>
<tr><td>2022-23 ಮತ್ತು 2023-24</td><td>4785</td><td>6601</td><td>94393.90</td></tr>
<tr><td>ಒಟ್ಟು</td><td>5789</td><td>8080</td><td>112393.90</td></tr>
</table>

- ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕೊಠಡಿಗಳ ದುರಸ್ಥಿ ಕಾಮಗಾರಿಗೆ ಮಂಜೂರಾದ ಅನುದಾನದ ವಿವರ:-

<table>
<tr><th>ವರ್ಷ</th><th>ಶಾಲೆಗಳ ಸಂಖ್ಯೆ</th><th>ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ)</th></tr>
<tr><td>2020-21</td><td>155</td><td>405.11</td></tr>
<tr><td>2021-22</td><td>518</td><td>1947.00</td></tr>
<tr><td>2022-23</td><td>1878</td><td>4850.00</td></tr>
<tr><td>2023-24</td><td>2162</td><td>7000.00</td></tr>
<tr><td>ಒಟ್ಟು</td><td>4713</td><td>14202.11</td></tr>
</table>

- 2021-22 ಮತ್ತು 2022-23ನೇ ಸಾಲಿಗೆ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅಗತ್ಯತೆಗನುಗುಣವಾಗಿ ಪೀಠೋಪಕರಣ ಒದಗಿಸಲು ರೂ. 70.00 ಕೋಟಿ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆಗೊಳಿಸಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

</td></tr>
</table>

<table>
<tr><td></td><td></td><td>• 2022-23ನೇ ಸಾಲಿನಲ್ಲಿ 13352 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು (6 ರಿಂದ 8) ನೇಮಕಾತಿ ಮಾಡಿಕೊಳ್ಳಲಾಗಿದೆ.</td></tr>
<tr><td>ಆ)</td><td>ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆಯೆಷ್ಟು; ಇದರಲ್ಲಿ 10ಕ್ಕಿಂತ ಕಡಿಮೆ ಮಕ್ಕಳಿರುವ ಸರಾಸರಿ ಶಾಲೆಗಳ ಸಂಖ್ಯೆಯೆಷ್ಟು; ಇರುವಂತಹ ಶಾಲೆಗಳಲ್ಲಿ ಏಕೋಪಾಧ್ಯಾಯ ಸರ್ಕಾರಿ ಶಾಲೆಗಳ ಸಂಖ್ಯೆಯೆಷ್ಟು;</td><td>ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ: 41908.<br>ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ: 4848<br>ರಾಜ್ಯದಲ್ಲಿ 10 ಕ್ಕಿಂತ ಕಡಿಮೆ ಮಕ್ಕಳ ದಾಖಲಾತಿ ಇರುವ ಶಾಲೆಗಳ ವಿವರ.
<table>
<tr><th>ಕ್ರ. ಸಂ.</th><th>ಶಾಲೆಯ ವಿಧ</th><th>ಶಾಲೆಗಳ ಸಂಖ್ಯೆ</th></tr>
<tr><td>1.</td><td>ಕಿರಿಯ ಪ್ರಾಥಮಿಕ ಶಾಲೆ</td><td>4030</td></tr>
<tr><td>2.</td><td>ಹಿರಿಯ ಪ್ರಾಥಮಿಕ ಶಾಲೆ</td><td>362</td></tr>
<tr><td></td><td>ಒಟ್ಟು</td><td>4392</td></tr>
</table>
• ರಾಜ್ಯದಲ್ಲಿ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಒಟ್ಟು 6584 ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿವೆ.<br>• ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರು ಹೊಂದಾಣಿಕೆ ಕೋಷ್ಟಕದ ಪ್ರಕಾರ 11 ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳಲ್ಲಿ ಒಬ್ಬ ಶಿಕ್ಷಕರನ್ನು ಮಾತ್ರ ನೀಡಲಾಗಿದೆ.</td></tr>
<tr><td>ಇ)</td><td>ಪ್ರತಿ ವರ್ಷವೂ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿರುವುದರಿಂದ, ಸರ್ಕಾರಿ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಎದುರಾಗಿದೆಯೇ: ಹಾಗಿದ್ದಲ್ಲಿ, ಕಳೆದ ಐದು ವರ್ಷಗಳಿಂದ ಎಷ್ಟು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ;</td><td>• ರಾಜ್ಯದಲ್ಲಿ ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚಿರುವುದಿಲ್ಲ. ಒಂದು ವೇಳೆ ಮಕ್ಕಳ ದಾಖಲಾತಿ ಶೂನ್ಯವಾದಲ್ಲಿ ತಾತ್ಕಾಲಿಕವಾಗಿ ಆ ಶಾಲೆಯನ್ನು ಸ್ಥಗಿತಗೊಳಿಸಿ ಭವಿಷ್ಯದಲ್ಲಿ ಮಕ್ಕಳು ದಾಖಲಾದಲ್ಲಿ ಪುನ: ಶಾಲೆಯನ್ನು ಪ್ರಾರಂಭಿಸಲಾಗುತ್ತದೆ.</td></tr>
<tr><td>ಈ)</td><td>ಕಳೆದ ಐದು ವರ್ಷದಲ್ಲಿ ಎಷ್ಟು ಖಾಸಗಿ ಶಾಲೆಗಳ ಪ್ರಾರಂಭಕ್ಕೆ ಅನುಮತಿ ನೀಡಲಾಗಿದೆ: ಎಷ್ಟು ಖಾಸಗಿ ಶಾಲೆಗಳನ್ನು ಮುಚ್ಚಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)</td><td>ಕಳೆದ 5 ವರ್ಷಗಳಲ್ಲಿ ಪ್ರಾರಂಭಿಸಲಾದ ಮತ್ತು ಮುಚ್ಚಲ್ಪಟ್ಟ ಖಾಸಗಿ ಶಾಲೆಗಳ ವಿವರ
<table>
<tr><th>ವಿವರ</th><th>ಪ್ರಾಥಮಿಕ & ಪ್ರೌಢ</th></tr>
<tr><td>ಪ್ರಾರಂಭಿಸಲಾದ ಶಾಲೆಗಳು</td><td>3059</td></tr>
<tr><td>ಮುಚ್ಚಲ್ಪಟ್ಟ ಶಾಲೆಗಳು</td><td>579</td></tr>
</table></td></tr>
<tr><td>ಉ)</td><td>ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ದಾಖಲಾತಿ ಕಡಿಮೆ ಆಗಲು ಕಾರಣ ಏನೆಂಬುದನ್ನು ಕಂಡು ಹಿಡಿಯಲು ಯಾವುದಾದರೂ ಸಮಿತಿಯನ್ನು ರಚಿಸಲಾಗಿದೆಯೇ? (ವಿವರಗಳನ್ನು ಒದಗಿಸುವುದು)</td><td>ಇಲ್ಲ.</td></tr>
</table>

ಸಂಖ್ಯೆ: ಇಪಿ 15 ಪಿಎಂಎ 2024

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು